ಕಾಲೇಜುಗಳಲ್ಲಿ ಅಧ್ಯಾಪಕರಾಗಿಯೂ ಕೆಲಸ ಮಾಡಿದ್ದಾರೆ.

2019ರಲ್ಲಿ ಲಂಡನ್ನಿನ 'ಇನ್‌ಸ್ಟಿಟ್ಯೂಟ್ ಆಫ್ ಕಂಟೆಂಪರರಿ ಆರ್ಟ್ಸ್'ನಲ್ಲಿ ಭಾನು ಕಪಿಲ್ ಒಂದು ರಂಗನಿರೂಪಣೆಯನ್ನು ಪ್ರಸ್ತುತಪಡಿಸಿದ್ದರು. ಅದನ್ನಾಧರಿಸಿದ ಕವನ ಸಂಗ್ರಹ 'ಹೌ ಟು ವಾಶ್ ಅ ಹಾರ್ಟ್' (ತೊಳೆಯುವುದು ಹೇಗೆ ಹೃದಯವನ್ನು) ಭಾನು ಅವರಿಗೆ ಪ್ರಶಸ್ತಿ ತಂದಕೊಟ್ಟಿದೆ. ಆತಿಥ್ಯ, ಆರೈಕೆ, ಅನ್ಯತೆಗಳ ಪರಿಧಿಯ ಕುರಿತ ಪ್ರಶ್ನೆಗಳನ್ನು ಶೋಧಿಸುವ ಪ್ರಯತ್ನ ಇದೆಂದು ಲೇಖಕಿ ಹೇಳಿಕೊಂಡಿದ್ದಾರೆ. ಈ ಸಂಕಲನಕ್ಕೆ ಮುನ್ನ ಭಾನು ಕಪಿಲ್ ಅವರು ಐದು ಕಾವ್ಯ ಸಂಗ್ರಹಗಳನ್ನು ಪ್ರಕಟಿಸಿದ್ದರು. ಅವರ ಮೊದಲ ಪುಸ್ತಕ 'The Vertical Interrogation of Strangers' (ಅಪರಿಚಿತರ ಉದ್ದನೆಯ ವಿಚಾರಣೆ). ಇದರಲ್ಲಿ, ಕವಯಿತ್ರಿ ಎಲ್ಲ ಭಾರತೀಯ ಮಹಿಳೆಯರನ್ನು – ಭಾರತದ, ಭಾರತದಿಂದ ವಲಸೆ ಹೋದ, ಅಥವಾ ಹಾಗೆ ಹೋದವರ ವಂಶಜರಿಗೆ – 'ಜೀವಮಾನವಿಡೀ ಯಾರ ಜೊತೆ ಜೀವಿಸುತ್ತೇವೆಯೋ, ಅವರಿಗೂ ಹೇಳಲು ಆಗಿಲ್ಲದ ವಿಚಾರವನ್ನು ಹೇಳುವುದು ಹೇಗೆ?' ಎಂದು ಕೇಳುವಂತಿದೆ.

2020ರಲ್ಲಿ ಅವರಿಗೆ ಅಮೆರಿಕದ ಪ್ರಸಿದ್ಧ 'ವಿಂಧಮ್–ಕ್ಯಾಂಪಬೆಲ್' ಪ್ರಶಸ್ತಿ ನೀಡಲಾಗಿತ್ತು. ಓದುಗರಿಗೆ ಭಾನು ಕಪಿಲ್ ಓರ್ವ ಪ್ರಯೋಗಶೀಲ ಕವಯಿತ್ರಿಯಾಗಿ ಕಂಡರೆ ಆಶ್ಚರ್ಯವಲ್ಲ. ಗದ್ಯ ಪದ್ಯಗಳ ನಡುವೆ ಸುಳಿವ ಅವರ ಬರವಣಿಗೆ ವೈಜ್ಞಾನಿಕ ಕಥನ, ಯಂತ್ರಮಿಶ್ರಿತಮಾನವ ಮತ್ತು ಕಾಲ್ಪನಿಕ ಕಥನಗಳನ್ನು ಹೊಂದಿರುತ್ತದೆ. ಇಂಗ್ಲಿಷ್‌ನಲ್ಲಿ 'ಕ್ರಾಸ್ ಜಾನ್ರ್' ಎಂದು ಕರೆಯಲಾಗುವ ಈ ಬರವಣಿಗೆಗಳು ಸಾಹಿತ್ಯದ ಸಾಧ್ಯತೆಗಳನ್ನು ವಿಸ್ತರಿಸುವ ಪ್ರಯೋಗಗಳು. ಭಾನು ಅವರ ಕವನಗಳು 'ಗಂಭೀರ ಬದಲಾವಣೆಗಳಿಗೆ ಪ್ರತಿಸ್ಪಂದಿಸುತ್ತ, ಇಂದು ಲಭ್ಯವಿರುವ ಶೈಲಿಸ್ವಾತಂತ್ರ್ಯವನ್ನು ಕಾವ್ಯ ಹೇಗೆ ನಿಭಾಯಿಸುತ್ತಿದೆ... ಕಾವ್ಯಕ್ಕೆ ಇರುವ ಸಾಧ್ಯತೆಗಳೇನು ಎನ್ನುವುದನ್ನು ತನ್ನ ತೀವ್ರಗಾಮಿ ರಚನೆಗಳಲ್ಲಿ ಶೋಧಿಸುತ್ತದೆ' ಎಂದಿದ್ದಾರೆ ಆಯ್ಕೆ ಸಮಿತಿಯ ಸದಸ್ಯರು. ಈ ಕವನವನ್ನು ನೋಡಿ:

ತೊಳೆಯುವುದು ಹೇಗೆ ಹೃದಯವನ್ನು:
ಹೀಗೆ:
ಬುಧವಾರ ಸಂಜೆ,
ಜೂನ್ ತಿಂಗಳಿನ ಮೊದಲಲ್ಲಿ
ಕೋಮಲ ಹೂಗಳು
ಮೊದಲು ಬಿಳಿಯಾಗಿ, ಮತ್ತೆ ಕೆಂಪಾಗಿ
ಆಮೇಲೆ ಹಸಿರಾಗಿ...
ICAಯ ವಿರಾಮದ ಕೋಣೆ
ಹಿತವಾಗಿ ತಂಪಾಗಿತ್ತು.
ಟೋಸ್ಟಿಗೆ ಹಚ್ಚಿದ ಜೇನಿಗೆ
ಬಂದಿದ್ದವು ಕಡಿಜೇನು.
ಅಮ್ಮ ಗೊಣಗಿದ್ದಾಳೆ:
ನೀನು ಒದೆಯುತ್ತ ಇರಬಹುದಾದ
ಎಲುಬುಗಳ ಚೀಲವಲ್ಲ ನಾನು.
ಬದಲಿಗೆ, ನಾನು ಪಾತ್ರೆಯಿಂದ
ಕೆಂಪು ನೀರ್ಗಲ್ಲಿನ ಮೇಲೆ
ಬಿಡುತ್ತೇನೆ ಹನಿ ಹನಿ ಬಿಸಿನೀರನ್ನ...

